ವಿಜಾಪುರ ಕ್ಷೇತ್ರದ ಉರಮನಾಳ ಗ್ರಾಮಕ್ಕೆ ಮಳೆನೀರು ಪ್ರವೇಶಿಸುತ್ತಿರುವುದು.

2744: (3835)

ಶ್ರೀ ಬಸನಗೌಡ ಆರ್ ಪಾಟೀಲ್ (ವಿಜಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ವಿಧಾನಸಭೆಯ ವ್ಯಾಪ್ತಿಯಲ್ಲಿ ಬರುವ ಉರಮನಾಳ ಗ್ರಾಮದ ಸಮೀಪವಿರುವ ದೋಣಿಯಿಂದ (ಹಳ್ಳ) ಅತಿವೃಷ್ಟಿಯಾದಾಗ ಊರಿನಲ್ಲಿ ನೀರು ಪ್ರವೇಶಿಸುತ್ತಿರುವುದರಿಂದ ಗ್ರಾಮಸ್ಥರಿಗೆ ಅನಾನುಕೂಲವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ದೋಣಿಯ ಆಳ ಮಣ್ಣಿನಿಂದ ಹೂತು ಈ ಘಟನೆ ಸಂಭವಿಸುತ್ತಿರುವುದರಿಂದ ಸರಕಾರ ಗ್ರಾಮವನ್ನು ಸ್ಥಳಾಂತರಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಾಗಿದ್ದಲ್ಲಿ ಯಾವಾಗ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಬಂದಿರುವುದಿಲ್ಲ.

ಆ) ಸದರೀ ಗ್ರಾಮ ಸ್ಥಳಾಂತರಿಸುವ ಅವಶ್ಯಕತೆ ಈಗ ಸದ್ಯಕ್ಕೆ ಇರುವುದಿಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಾದಾಮಿ ತಾಲ್ಲೂಕು ಹುಟ್ಟುವಳಿ ಮಾರುಕಟ್ಟೆ ಸಮಿತಿ ಆದಾಯ ಸೋರುವಿಕೆ.

2745: (3795)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕು ಹುಟ್ಟುವಳಿ ಮಾರುಕಟ್ಟೆ ಸಮಿತಿ ಆದಾಯದಲ್ಲಿ ಸೋರಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (1995 ರಿಂದ 1998ರ ವರೆಗೆ ಆದ ಆದಾಯ ತಿಳಿಸುವುದು);